

ಕಲಬುರ್ಗಿಯವರ ಜಾತಿ ಪರಿಕಲ್ಪನೆಯಲ್ಲಿ ಇದ್ದದ್ದು ಎರಡೇ ಜಾತಿ: ಒಂದು ದುಡಿಯುವ ಜಾತಿ, ಇನ್ನೊಂದು ದುಡಿಯದ ಜಾತಿ. ಅವರಿಗಿದ್ದ ಚಟ ಒಂದೇ ಒಂದು – ಕೆಲಸ ಮಾಡುವುದು ಮತ್ತು ಮಾಡಿಸುವುದು. ಸಿಟ್ಟು ಎಂದರೆ ಪಗಾರ ಪಡೆದು ದುಡಿಯದ ಸೋಮಾರಿಗಳ ಬಗ್ಗೆ. ಸಂಪತ್ತು ಎಂದರೆ ಆರ್ದ್ರ, ಆಪ್ತತೆ. ಸಮೃದ್ಧಿ ಎಂದರೆ ಓದು, ಬರಹ. ಈ ಎಲ್ಲಾ ಹಿರಿತನದಿಂದಲೇ ಕನ್ನಡ ನಾಡು ಕಲಬುರ್ಗಿಯವರನ್ನು ‘ಐಕಾನ್’ ಆಗಿ ಸ್ವೀಕರಿಸಿದ್ದು.